ರೂಪಾಯಿ ಖರ್ಚಿನಲ್ಲಿ ಬಹುದೊಡ್ಡದೊಂದು ಭ್ರಮಾಲೋಕವೇ ಸಿದ್ಧವಾಗುತ್ತದೆ. ಅಲ್ಲಿ ನಾನು ದೇವಿ, ಇನ್ನೊಬ್ಬ ನಟ ದೇವ. ಜಗಮಗಿಸುವ ಬೆಳಕಿನಲ್ಲಿ ದೇವಿಯ ಒಡವೆ, ಆಯುಧ ತೊಟ್ಟು ಇಡೀ ಜಗತ್ತು ವಂದಿಸುವ ದೇವತೆಗಳಾಗಬೇಕು ನಾವು, ತಮಾಷೆಯ ಮಾತೆ ಇದು? ಅಭಿನಯ, ನಿಜ. ಆದರೆ ಅಂತರಂಗವೂ ಒಂದಿದೆಯಲ್ಲ! ಆಶಾ ಬಸವಳಿದುಹೋದಳು.

ಕರಾವಳಿಯ ಡಾಂಬರು ರಸ್ತೆಗಳು ಆಗ ತಾನೇ ಶುರುವಾದ ಮಳೆಯ ಥಂಡಿಯನ್ನು ತಮ್ಮೊಳಗೆ ಇಳಿಸಿಕೊಳ್ಳುತ್ತಿದ್ದವು. ಸುರಿದ ಮಳೆಯಲ್ಲಿ ಕಂಡ ಊರುಗಳೆಲ್ಲವೂ ಒಳ್ಳೆ ಸ್ನಾನ ಮಾಡಿದಂತೆ ತೋರುತ್ತಿದ್ದವು. ಜೂನ್ ತಿಂಗಳಿನ ಅಂಥದೊಂದು ದಿನ ಆಶಾ ತನ್ನ ನಂಬಿಕೆಯ ಡ್ರೈವರನೊಂದಿಗೆ ಕರಾವಳಿಗೆ ಪಯಣ ಬೆಳೆಸಿದ್ದಳು. ವಿಳಾಸ ಸರಿಯಾಗಿ ತಿಳಿಯದ ಆ ಹಳ್ಳಿಯನ್ನೂ, ಆ ಹಳ್ಳಿಯ ಪೂಜಾರಿಯನ್ನೂ ಕೇಳುತ್ತ ತಾಲೂಕಿನಿಂದ ಸುಮಾರು ದೂರದ ಹಳ್ಳಿಯನ್ನು ಮುಟ್ಟಲು ಸಾಕಷ್ಟು ತೊಂದರೆಯೇ ಆಯಿತು. ಕಲ್ಲು–ಮಣ್ಣುಗಳ ರಸ್ತೆಯ ಪಾಗಾರದಂಚಿಗೆ ಕಾರು ನಿಲ್ಲಿಸಿ ಆಶಾದೇವಿ ದೇವಾಲಯ ಪ್ರವೇಶಿಸಿದಳು.

ಅದೇನೂ ತುಂಬ ಪ್ರಸಿದ್ಧ ದೇವಾಲಯವಲ್ಲ. ಚಕಿತ ಕಂಗಳಿಂದ ಇವಳನ್ನು ನೋಡಿದ ಅರ್ಚಕರು ‘ಅರೆ, ಆಶಾದೇವಿಯರಲ್ಲವೆ?’ ಅಂದರು. ಆಶಾದೇವಿ ಹೌದೆಂದು ತಲೆಯಾಡಿಸಿ ಪಕ್ಕದ ಕಟ್ಟೆಯ ಮೇಲೆ ಕುಳಿತಳು. ‘ನಿಮಗೆ ಊಟವಾದಂತಿಲ್ಲ’ ಭಟ್ಟರಂದರು. ‘ಸ್ನಾನವೂ ಆಗಿಲ್ಲ’ ಎಂದಳು ಆಶಾದೇವಿ.

ಭಟ್ಟರ ಪುಟ್ಟ ಮನೆಯಲ್ಲಿ ಸಡಗರದ ಹಬ್ಬವೇ ನಡೆಯಿತು. ‘ತಾನು ಬಂದಿದ್ದೇನೆಂದು ಯಾರಿಗೂ ಹೇಳಬೇಡಿ. ಸುದ್ದಿ ಹರಡಿದರೆ ತುಂಬ ತೊಂದರೆಯಾಗುತ್ತದೆ’ ಎಂದು ಆಶಾದೇವಿ ಬಿನ್ನೈಸುತ್ತಲೇ ಇದ್ದಳು. ‘ಇದೊಂದು ವೈಯಕ್ತಿಕ ಭೇಟಿ. ರಹಸ್ಯ ಕಾಪಾಡುವುದು ನಮ್ಮ ಕರ್ತವ್ಯ. ಯೋಚಿಸಬೇಡಿ’ ಎಂದು ಭಟ್ಟರು ಭರವಸೆ ಕೊಟ್ಟರು. ಭಟ್ಟರ ಮಡದಿ ಯಶೋದಕ್ಕ ಬಡಿಸಿದ ತಂಬುಳಿ, ಮೊಗೆಕಾಯಿ ಹುಳಿಯ ಊಟವನ್ನು ಆಶಾದೇವಿ ಹೊಟ್ಟೆ ತುಂಬ ಉಂಡಳು.

ದೇವಿಯಲ್ಲಿ ಅರ್ಚಕರು ಆಶಾದೇವಿಯ ಪರವಾಗಿ ವಿಶೇಷ ಪೂಜೆ ಸಲ್ಲಿಸಿದರು. ‘ದೇವಿಯ ಸನ್ನಿಧಿಗೆ ಇನ್ನೊಬ್ಬಳು ದೇವಿಯ ಆಗಮನವೆಂದರೆ ಸಾಮಾನ್ಯ ಮಾತೆ!’ ಎಂದು ಉದ್ಗರಿಸಿದರು. ‘ಹಾಗೆಲ್ಲ ಮಾತಾಡಬೇಡಿ’ ಎಂದಳು ಆಶಾದೇವಿ.

‘ಯಾಕೆ, ಯಾಕೆ ಹಾಗೆ ಹೇಳಬಾರದು?’

‘ಇದು ಇಂದಿದ್ದು ನಾಳೆ ಮಣ್ಣಾಗುವ ಜೀವ.’

‘ಅದರೊಳಗೂ ದೇವಿ ತೋರುವುದುಂಟು. ಚಿನ್ಮಯಿ ಅವಳು – ಮೃಣ್ಮಯಿಯೂ ಆಗಬಲ್ಲಳು. ಅವಳ ಇಚ್ಛೆ ಅದು.’

‘ಅದೆಲ್ಲ ನನಗೆ ತಿಳಿಯದು. ಬೇಕಾಗಿಯೂ ಇಲ್ಲ. ನನಗೊಂದು ಸಂದಿಗ್ಧ ಒದಗಿದೆ.’

ತಾನು ದೇವಿಯ ಪಾತ್ರ ವಹಿಸಬೇಕಾದ ಅವಕಾಶ, ಒತ್ತಡ, ತನ್ನೊಳಗಿನ ಒದ್ದಾಟ ಎಲ್ಲವನ್ನೂ ಆಶಾದೇವಿ ಹೇಳಿಕೊಳ್ಳುತ್ತ ಹೋದಳು. ಹೇಳಿದ್ದು ಆ ಅಪರಿಚಿತ ಊರಿನ ಆ ಅಪರಿಚಿತ ದೇವಿಯ ಎದುರೋ? ಅವಳ ಪೂಜೆಯ ಕೈಂಕರ್ಯದ ಆ ಅಪರಿಚಿತ ಭಟ್ಟರ ಎದುರೋ? ರಸಿಕ ಜಗತ್ತನ್ನು ತನ್ನ ಕಾಲಬೆರಳ ಸಂಧಿಯಲ್ಲಿ ನಿಲ್ಲಿಸಿದ ಚೆಲುವೆ, ಪಾರದರ್ಶಕ ಬಟ್ಟೆಗಳಲ್ಲಿ ಅಪಾರದರ್ಶಕರನ್ನು ಹುಚ್ಚರಂತೆ ಮಾಡಿದ

